ಅನ್ನು ಕಡ್ಡಾಯ ಮಾಡಿಲ್ಲದಿರುವುದರಿಂದ ಇಷ್ಟವಿಲ್ಲದವರು ಆ ಸ್ಕೀಮ್‌ನ ಆಶ್ರಯದಲ್ಲಿ ಬರ ಬೇಕಾಗಿಲ್ಲ. ಆದ್ದರಿಂದ ನೀವು ಈ ಹಿಂದಿನ ಪದ್ದತಿ ಏನಿತ್ತು ಅದರ ಪ್ರಕಾರ....

ಶ್ರೀ ಎ. ರಾಮದಾಸ್ : ಮಾನ್ಯ ಸಭಾ ನಾಯಕರು ದಯವಿಟ್ಟು ಆಲಿಸಬೇಕು. ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್‌ನಾಳೆಯಿಂದ ಜಾರಿಗೆ ಬರುತ್ತಿದೆ. ಈಗಾಗಲೇ ಆ ಸ್ಕೀಮ್ ಬಗೆಗಿನ ಪುಸ್ತಕಗಳು ಪ್ರಿಂಟ್ ಆಗಿವೆ. ಹಿಂದಿನ ಸರ್ಕಾರ 1999ರಲ್ಲಿ ಜಾರಿ ಮಾಡಿದ್ದಂತಹ ಸ್ಕೀಮ್ ಅನ್ನು ಅವೈಜ್ಞಾನಿಕವಾಗಿದೆ ಎಂದು ಅದಕ್ಕೆ ತಡೆಯಾಜ್ಞೆ ನೀಡಿತ್ತು. ಆ ಪದ್ದತಿಯನ್ನೂ ಕೂಡ ಈಗ ಜಾರಿಗೆ ಕೊಡಲಾಗುತ್ತಿದೆ. ನಾಳೆಯಿಂದ ಕಂಪಲ್‌ಸರಿ ಆ ಪದ್ದತಿಯಡಿ ಹಣವನ್ನು ಕೂಡ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಈ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಕೂಡ ಜಾರಿಗೆ ತರುತ್ತಿದ್ದಾರೆ. ಆ ದೃಷ್ಟಿಯಿಂದ ಸರ್ಕಾರ ಕೊಟ್ಟಿರುವಂತಹ ಹೊಸ ಯೋಜನೆ ಜಾರಿಗೆ ಕೊಡುವವರೆಗಾದರೂ ಹಳೆಯ ಯೋಜನೆಯನ್ನು ನಿಲ್ಲಿಸಿ ಎಂದು ನಾವು ಕೇಳುತ್ತಿದ್ದೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಅದರ ಬಗ್ಗೆ ಒಂದು ಸದನದ ಸಮಿತಿಯನ್ನು ಮಾಡಿ. ಸದ್ಯಕ್ಕೆ ದಯಮಾಡಿ ಅದನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ: ಇದನ್ನು 15ನೇ ತಾರೀಖಿನವರೆಗೆ ಮುಂದಕ್ಕೆ ಹಾಕುತ್ತಿದ್ದೇನೆ. ಈ ಮಧ್ಯೆ ಇದರ ಸಮಸ್ಯೆಗಳನ್ನು ಪರಿಹಾರ ಮಾಡೋಣ.

ಶ್ರೀ ಹಂಪನಗೌಡ ಬಾದರ್ಲಿ: ಸಿಂಧನೂರಿನಲ್ಲಿ ಕುಡಿಯುವ ನೀರಿನ ಯೋಜನೆ ಪೂರ್ಣ ಗೊಳಿಸುವ ಬಗ್ಗೆ ಈಗಾಗಲೇ ವ್ಯಾಪ್ತಿಯಲ್ಲಿ ನೀರು ಬಂದಿದ್ದರೂ ಕೂಡ ಅಲ್ಲಿ ಏನಾಗಿದೆ ಎಂದರೆ ಹಿಂದೆ ಅಂದಾಜು ಪತ್ರಿಕೆ ತಯಾರು ಮಾಡತಕ್ಕಂತಹ ಸಂದರ್ಭದಲ್ಲಿ ಕೊಪ್ಪಳ ವ್ಯಾಪ್ತಿಯಲ್ಲಿ ಈಗಿರುವ ಡಿಸ್ಟ್ರಿಬ್ಯೂಷನ್ ಲೈನ್ ಆ ಒಂದು ಯೋಜನೆಯಲ್ಲ ಸೇರಿರಲಿಲ್ಲ. ಈಗ ಅದಕ್ಕಾಗಿ 3 ಕೋಟಿ 50 ಲಕ್ಷ ರೂಪಾಯಿಗಳ ಅಂದಾಜು ತಯಾರು ಮಾಡಿದ್ದು ಅದು ಬೋರ್ಡ್ ಮುಂದೆ ಬಂದು ಬೋರ್ಡ್‌ನಿಂದ ಅಪ್ರೂವಲ್ ಆಗಿದೆ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಸಚಿವ ಸಂಪುಟದ ಒಪ್ಪಿಗೆ ದೊರಕಿಸಿಕೊಡುತ್ತೇನೆ ಎಂದು ಹೇಳಿದ್ದರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತೀವ್ರಗತಿಯಿಂದ ಅದಕ್ಕೆ ಒಪ್ಪಿಗೆ ನೀಡಿ ಕೂಡಲೇ ಕೆಲಸ ಪ್ರಾರಂಭಿಸಿ ನಗರಕ್ಕೆ ನೀರನ್ನು ಒದಗಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(6) ಅಧ್ಯಕ್ಷರ ಅಪ್ಪಣೆ ಮೇರೆಗೆ

ಬಿಜಾಪುರದ ಜಲಾನಯನ ಯೋಜನೆಯ ಬಗ್ಗೆ ಪ್ರಸ್ತಾಪ

ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನಬಾಗೇವಾಡಿ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಂತ್ರಿಕ ಇಲಾಖೆಯ ಮಂಜೂರಾತಿ ಪಡೆಯದೇ ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ಸುಮಾರು 8 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂಬ ಸುದ್ದಿ ನಿನ್ನೆ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಬಂದಿದೆ. ಬಿಜಾಪುರ ಜಿಲ್ಲೆ ಮೊದಲೇ ಬರಗಾಲ ಪೀಡಿತ ಜಿಲ್ಲೆ. ಆಭೂಮಿಯಲ್ಲಿ ನೀರಿನ ಪ್ರಮಾಣ ಹೆಚ್ಚು ಮಾಡಬೇಕು, ಅರಣ್ಯವನ್ನು ಹೆಚ್ಚು ಮಾಡಬೇಕು, ಬೇಸಾಯಕ್ಕೆ ಉಪಯೋಗ ಇಲ್ಲದ ಭೂಮಿಯನ್ನು ಬೇಸಾಯಕ್ಕೆ ಅನುವು ಮಾಡಿಕೊಡಬೇಕು ಎಂಬ ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಜಿಲ್ಲಾ ಪಂಚಾಯಿತಿ ಮುಖಾಂತರ ಈ 8 ಕೋಟಿ ರೂಪಾಯಿಗಳ ಯೋಜನೆಯನ್ನು ಮೂರು ಸ್ವಯಂಸೇವಾ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಇಂಡಿ ತಾಲ್ಲೂಕಿನ ಭತಗುಣಕಿ

ಯೋಜನೆಯ ಕೆಲಸವನ್ನು ಯುವಕ ವಿಕಾಸ ಕೇಂದ್ರ ಸಂಸ್ಥೆಗೆ ವಹಿಸಿಕೊಡ ಲಾಗಿದೆ. ಮಂಜೂರಾದ ಹಣ 2 ಕೋಟಿ 47 ಲಕ್ಷ ರೂಪಾಯಿಗಳಾದರೆ ಬಿಡುಗಡೆಯಾದ ಹಣ 2 ಕೋಟಿ 7 ಲಕ್ಷ ರೂಪಾಯಿಗಳು. ಅದರಲ್ಲಿ ಖರ್ಚಾದ ಹಣ 2ಕೋಟಿ 4 ಲಕ್ಷ ರೂಪಾಯಿಗಳು ಬಿಜಾಪುರ ತಾಲ್ಲೂಕಿನ ಬರಟಗಿ ಯೋಜನೆಗೆ ಮೀಸಲಟ್ಟಂತಹ ಹಣ ಒಂದು ಕೋಟಿ 93 ಲಕ್ಷ ರೂಪಾಯಿಗಳಾದರೆ ಬಿಡುಗಡೆಯಾದ ಹಣ ಒಂದು ಕೋಟಿ 62 ಲಕ್ಷ ರೂಪಾಯಿಗಳು. ಅದರಲ್ಲಿ ಖರ್ಚಾದಂತಹ ಹಣ ಒಂದು ಕೋಟಿ 44 ಲಕ್ಷ ರೂಪಾಯಿಗಳಾಗಿರುತ್ತದೆ. ಸಬಲಾ ಸಂಸ್ಥೆಗೆ ವಹಿಸಿಕೊಟ್ಟಿರುವ ಸಿಂಧಗಿ ತಾಲ್ಲೂಕಿನ ಯರಗಲ್ ಯೋಜನೆಯ ಮಂಜೂರಾದ ಹಣ 1 ಕೋಟಿ 97 ಲಕ್ಷ ರೂಪಾಯಿಗಳಾದರೆ ಬಿಡುಗಡೆಯಾದ ಹಣ ಒಂದು ಕೋಟಿ 76 ಲಕ್ಷ ರೂಪಾಯಿಗಳು. ಅದರಲ್ಲಿ ಖರ್ಚಾದ ಹಣ 1 ಕೋಟಿ 56 ಲಕ್ಷ ರೂಪಾಯಿಗಳಾಗಿರುತ್ತದೆ.

ಅಧ್ಯಕ್ಷರು : ಎಲ್ಲಾ ಡೀಟೈಲ್ಸ್ ಅನ್ನೂ ಈಗ ಹೇಳುತ್ತಾ ಹೋಗಬೇಡಿ. ಅಲ್ಲಿ ಏನಾಗಬೇಕೆಂದು ಹೇಳಿ ಸಾಕು.

ಶ್ರೀ ಎನ್. ಕೆ. ಬೆಳ್ಳುಬ್ಬಿ : ಅಲ್ಲಿ ನಾಲ್ಕಾಣೆ ಕೆಲಸ ಕೂಡ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕೆಂದು ಕೋರುತ್ತೇನೆ. ಬೇರೆ ಯೋಜನೆಯಡಿ ಕೂಡ ಬಿಜಾಪುರ ಜಿಲ್ಲೆಗೆ ಹಣ ಬಿಡುಗಡೆಯಾಗಿದೆ ಎಂಬ ಸುದ್ದಿ ಇದೆ. ಸುಮಾರು 80 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂಬ ಸುದ್ದಿ ಪತ್ರಿಕೆಯಲ್ಲಿ ಬಂದಿದೆ. ಮುಂದ ಸದನವು ಸೇರುವುದರೊಳಗಾಗಿ ಇದರ ಬಗ್ಗೆ ಪೂರ್ತಿಯಾಗಿ ತನಿಖೆ ನಡೆಸಿ ಈ ಸದನಕ್ಕೆ ವರದಿ ಒಪ್ಪಿಸಬೇಕೆಂಬ ಮನವಿಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಮಾಡುತ್ತಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ (ಕೃಷಿ ಸಚಿವರು) : ಪತ್ರಿಕೆಯಲ್ಲಿ ಬಂದಿರುವ ಸುದ್ದಿಯನ್ನು ನಾನು ನೋಡಿಲ್ಲ. ಅಲ್ಲಿ ಹಣದ ದುರುಪಯೋಗವಾಗಿದೆ ಎಂಬ ಬಗ್ಗೆ ವಿಶೇಷವಾಗಿ ತಮ್ಮ ಬಳಿ ಏನಾದರೂ ದಾಖಲಾತಿಗಳಿದ್ದರೆ ದಯಮಾಡಿ ಅವುಗಳನ್ನು ನನಗೆ ಕಳುಹಿಸಿಕೊಡಿ. ನಾನು ಅದರ ಬಗ್ಗೆ ವರದಿ ತರಿಸಿಕೊಂಡು ಸೂಕ್ತವಾದಂತಹ ಕ್ರಮವನ್ನು ಕೈಗೊಳ್ಳುತ್ತೇನೆ. ಬಿಜಾಪುರ ಜಿಲ್ಲೆಯಲ್ಲೇ 80 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಈ ಯೋಜನೆಯಡಿಯಲ್ಲಿ ನಾವು ಇಡೀ ರಾಜ್ಯಕ್ಕೆ ಹಂಚುವ ಹಣವೇ 80ಕೋಟಿ ರೂಪಾಯಿಗಳನ್ನು ಮೀರುವುದಿಲ್ಲ. ಹೀಗಿರುವಾಗ 80 ಕೋಟಿ ರೂಪಾಯಿಗಳ ಅವ್ಯವಹಾರ ಹೇಗೆ ಆಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ನನಗೂ ಅದರ ಬಗ್ಗೆ ಬಹಳ ಕುತೂಹಲ ಇದೆ. ದಯಮಾಡಿ ನಿಮ್ಮಲ್ಲಿರುವ ಮಾಹಿತಿ ಕಳುಹಿಸಿಕೊಡಿ, ನಾನು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು, ತೆಗೆದುಕೊಂಡ ಕ್ರಮದ ಬಗ್ಗೆ ಈ ಸದನಕ್ಕೆ ಉತ್ತರ ಕೂಡ ಕೊಡುತ್ತೇನೆ ಎಂದು ಭರವಸೆ ನೀಡಬಯಸುತ್ತೇನೆ.